CLAUSE 1

In sub-clause (2), for the words "it shall come into force at once", the words "It shall be deemed to have come into force from the first day of November, 1990", shall be substituted.

ಅಧ್ಯಕ್ಷರು : ತಿದ್ದುಪಡಿಯನ್ನು ಮಂಡಿಸಲಾಗಿದೆ. ತಿದ್ದುಪಡಿ ಹೀಗಿದೆ:

CLAUSE 1

In sub-clause (2), for the words "It shall come into force at once", the words "It shall be deemed to have come into force from the first day of November, 1990" shall be substituted.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ತಿದ್ದುಪಡಿಗೆ ಅನುಮೋದನೆ ದೊರಕಿತು.

ಅಧ್ಯಕ್ಷರು : ಪ್ರಸ್ತಾವ ಹೀಗಿದೆ:"ತಿದ್ದುಪಡಿಯಾದ 1ನೇ ಖಂಡವು ವಿಧೇಯಕದ ಅಂಗವಾಗಿರಬೇಕು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ತಿದ್ದುಪಡಿಯಾದ ೧ನೇ ಖಂಡವು ವಿಧೇಯಕದ ಅಂಗವಾಯಿತು.

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ತಿದ್ದುಪಡಿಯಾದಂತೆ ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

(ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು)

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಅಂಗೀಕಾರ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"1990ನೇ ಇಸವಿಯ ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿಷಯ : ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ತಿದ್ದುಪಡಿ ಮಸೂದೆ ಬಗ್ಗೆ ಪ್ರಸ್ತಾಪ

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಅತ್ಯಂತ ಪ್ರಮುಖವಾಗಿ ಯಾವ ಉದ್ದೇಶದಿಂದ ಈ ಸದನ ಪ್ರಾರಂಭವಾಯಿತೋ, ವಿಶೇಷ ಅಧಿವೇಶನ ಕರೆದು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ತಿದ್ದುಪಡಿ ಬಗ್ಗೆ ಮಸೂದೆ ಚರ್ಚೆಯಾಗಿ ಅದು ಅನುಮೋದನೆಯಾಗಬೇಕು ಎಂಬ ಹಿನ್ನೆಲೆಯಲ್ಲಿ.....

ಅಧ್ಯಕ್ಷರು : ಈಗ ಚರ್ಚೆ ಶುರುವಾಗುತ್ತದೆ. ಮಾನ್ಯ ಬೈರೇಗೌಡರು ಈಗ ಮಾತನಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಚರ್ಚೆ ಪ್ರಾರಂಭವಾಗಲಿ. ನಾವು ಕೂಡ ಮಾತನಾಡುವುದಕ್ಕೆ ತಯಾರಿದ್ದೇವೆ. ಎಷ್ಟು ಹೊತ್ತಾದರೂ ಮಾತನಾಡೋಣ.ಆದರೆ ಪ್ರಶ್ನೆ ಇರತಕ್ಕದ್ದು ಮಂತ್ರಿಮಂಡಲ ತೆಗೆದುಕೊಂಡ ತೀರ್ಮಾನ, ಈ ಹಿನ್ನೆಲೆಯಲ್ಲಿ ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿ ಬಿಡಬೇಕು ಎನ್ನುವಂಥ ಪ್ರಯತ್ನ ಬಹುಶಃ ಸ್ವತಂತ್ರ ಭಾರತದಲ್ಲಿ ಈ ರೀತಿ ಪ್ರಜಾತಂತ್ರದ ವ್ಯವಸ್ಥೆಗೆ ಧಕ್ಕೆ ತರತಕ್ಕ ಇಂಥ ತಿದ್ದುಪಡಿ ತಂದು ಈ ರೀತಿ ಮುಖಭಂಗ ಮಾಡತಕ್ಕ ಪ್ರಯತ್ನ ಯಾವುದಿದೆ ಇದನ್ನು ಯಾವುದೇ ಸರ್ಕಾರ ಮಾಡಿರಲಿಲ್ಲ. ಈ ಬಗ್ಗೆ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ. ಸದನದಲ್ಲಿ ಸುಮ್ಮನೆ ತಪ್ಪಾಗಿದೆ ಎಂದು ಒಪ್ಪಿಕೊಂಡು ಬಿಲ್ಲನ್ನು ಪೂರ್ಣವಾಗಿ ವಾಪಸ್ ತೆಗೆದುಕೊಂಡು ಮುಂದೆ ವಿರೋಧಪಕ್ಷದ ಜೊತೆ ಸುದೀರ್ಘವಾಗಿ ಚರ್ಚೆ ಮಾಡಿ ಒಂದು ತಿದ್ದುಪಡಿ ತರುತ್ತೇವೆ ಜನರ ಹಿತದೃಷ್ಟಿಯಿಂದ ಎಂದು ಒಪ್ಪಿಕೊಳ್ಳಬೇಕೇ ಹೊರತು ಫಾಲ್ಸ್ ಪ್ರಿಸ್ಟೀಜ್‌ನಿಂದ ಈ ಸರ್ಕಾರ ಇರುವುದರಲ್ಲಿ ಅರ್ಥವಿಲ್ಲ. ಕಳೆದ ಅನೇಕ ದಿವಸಗಳಿಂದ ಇಲ್ಲಿ ಚರ್ಚೆಯಾಗುತ್ತಿದೆ.ಅದನ್ನು ನೋಡಿ ಜನ ನಗುತ್ತಿದ್ದಾರೆ. ಸನ್ಮಾನ್ಯ ಹಿರಿಯ ಸಚಿವರಾದ ವೀರಪ್ಪ ಮೊಯಿಲಿಯವರಿದ್ದಾರೆ. ಅವರಿಗೆ ಅತ್ಯಂತ ವಿನಯದಿಂದ ಹೇಳುತ್ತೇನೆ. ಬಹುಶಃ ಇಂಥ ತಪ್ಪು ಮುಂದೆ ಮಾಡಬೇಡಿ. ಜನರು ಕ್ಷಮಿಸುವುದಿಲ್ಲ. ದಯಮಾಡಿ ಬೇಷರತ್ತಾಗಿ ಇದನ್ನು ವಾಪಸ್ ತೆಗೆದುಕೊಂಡು ತಪ್ಪು ಎಂದು ಒಪ್ಪಿಕೊಳ್ಳಿ. ಮತ್ತು ಯಾರು ಈ ಒಂದು ವಿಚಿತ್ರ ಸನ್ನಿವೇಶಕ್ಕೆ ತಂದಿದ್ದಾರೆ, ಆ ಬಸವಲಿಂಗಪ್ಪನವರ ಸ್ಥಿತಿ ಏನು? ಸನ್ಮಾನ್ಯ ಅಧ್ಯಕ್ಷರೆ,ಒಂದು ಕಾಮಾ,ಫುಲ್‌ಸ್ಟಾಪ್ ವ್ಯತ್ಯಾಸ ಮಾಡುವುದಿಲ್ಲ ಎಂದು ಹೇಳಿದ ಸನ್ಮಾನ್ಯ ಸಚಿವರು ಇಲ್ಲಿ ಇಲ್ಲ. ಈಗ ಸರ್ಕಾರ ಏನು ಮಾಡುವುದಕ್ಕೆ ಹೊರಟಿದೆ ಮಂತ್ರಿಮಂಡಲದ ತೀರ್ಮಾನ ಏನು? ಡೆಲ್ಲಿಗೆ ಹೋಗಿ ಬಂದಮೇಲೆ ಪತ್ರಿಗೆಯಲ್ಲಿ ಪ್ರಕಟವಾಗಿರುವುದೇನು? ಅದನ್ನು ಸ್ಪಷ್ಟ ಮಾಡಿ. ಸಮಯ ವ್ಯರ್ಥ ಮಾಡುವುದು ಬೇಡ.ಜನ ನಾಳೆ ನಮ್ಮನ್ನು ಕೇಳಿದಾಗ ಏನು ಉತ್ತರ ಕೊಡುವುದು? ಇಲ್ಲಿ ವೀರಪ್ಪ ಮೊಯಿಲಿಯವರಿದ್ದಾರೆ. ಮಂತ್ರಿಮಂಡಲದ ಅಭಿಪ್ರಾಯ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಮಗೆ ಅಧಿಕಾರ ಇದೆ. ನಾವು ಪತ್ರಿಕೆಯಲ್ಲಿ ಮಾತ್ರ ಓದಿ ತಿಳಿದುಕೊಂಡಿದ್ದೇವೆ : ಈಗ ನಿಜ ಸಂಗತಿಯನ್ನು ತಿಳಿಸಬೇಕು.

ಅಧ್ಯಕ್ಷರು : ಯಡಿಯೂರಪ್ಪನವರೆ, ಬೆಳವಣಿಗೆಯಿಂದ ನಿಮಗೆ ಏನಾದರು ಬೇಜಾರಾಗಿದೆಯೋ? ನಿಮಗೆ ಸಂತೋಷ ಆಗಿದೆ ತಾನೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ ಸ್ವಾಮಿ. ನನಗೆ ಪೂರ್ಣ ಬೇಜಾರಾಗಿದೆ. ಏಕೆಂದರೆ, ಈ ತಿದ್ದುಪಡಿ ಮಸೂದೆಯನ್ನು ಈಗ ಇವರು ಮಂಜೂರು ಮಾಡಿಕೊಂಡು ಹೋಗಿದ್ದರೆ ನಾವು ರಾಜ್ಯದಲ್ಲಿ ಓಡಾಡುವುದಕ್ಕೆ ಕಷ್ಟವಾಗುತ್ತಾ ಇತ್ತು. ಅದಕ್ಕೋಸ್ಕರ ತಮ್ಮ ಮೂಲಕ ಕೇಳುತ್ತೇನೆ. ಆದ್ದರಿಂದ

ಇದನ್ನು ವಾಪಸ್ಸು ಪಡೆದು ಮೂಲ ಮಸೂದೆ ಏನು ಇತ್ತೋ, ಅದನ್ನು ತರತಕ್ಕ ಧೈರ್ಯವನ್ನು ಮಾಡಲಿ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಇರಬೇಕಾಗುತ್ತದೆ.

ಅಧ್ಯಕ್ಷರು : ಬೆಳಿಗ್ಗೇನೆ ಮಾನ್ಯ ಸಚಿವರು ಹೇಳಿದರು, ನಿಮ್ಮ ಸಲಹೆಗಳೆಲ್ಲವನ್ನೂ ಪರಿಶೀಲಿಸುತ್ತೇನೆ ಎಂದು ; ಇದೂ ಒಂದು ಪರಿಶೀಲನಾರ್ಹವಾದ ಸಲಹೆ.

ವಿಧಾನ ಮಂಡಲ ಕಾರ್ಯಾಲಯದ ಅಧಿಕಾರಿ ಒಬ್ಬರನ್ನು ಅಮಾನತ್ತಿನಲ್ಲಿಟ್ಟಿರತಕ್ಕ ವಿಷಯದ ಬಗ್ಗೆ ಪ್ರಸ್ತಾಪ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, ತಮಗೆ ಒಂದು ಪತ್ರವನ್ನು ಈ ದಿನ ಬರೆದಿದ್ದೇನೆ. ಆ ಪತ್ರದಲ್ಲಿ ವಿಧಾನಮಂಡಲದ ಕಾರ್ಯಲಯದ ಒಬ್ಬ ಅಧಿಕಾರಿಯನ್ನು ತಾವು ಅಮಾನತ್ತಿನಲ್ಲಿ ಇಟ್ಟಿರತಕ್ಕ ವಿಷಯದ ಬಗ್ಗೆ ಆದು ತಮಗೆ ಸಂಬಂಧಪಟ್ಟ ಒಂದು ವಿಷಯ ಆಗಿದ್ದರೂ ಸಹಾ, ತಮ್ಮಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳಲು ಇಷ್ಟಪಡುತ್ತೇನೆ. ಏನೆಂದರೆ, ಆ ದಿವಸ ನಮ್ಮ ಬಿಸನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ನಡೆಯುವ ಸಂದರ್ಭದಲ್ಲಿ ಒಂದು ಗಮನ ಸೆಳೆಯುವ ವಿಚಾರದಲ್ಲಿ ಈ ಸರ್ಕಾರದ ಗಮನ ಸೆಳೆಯುವುದಕ್ಕೆಂದು ಹೇಳಿ ಮಾನ್ಯ ಸದಸ್ಯರೊಬ್ಬರ ಸಹಿಯನ್ನು ಹಾಕುವುದಕ್ಕೆ ನಾನು ಅವರಿಗೆ ವಿನಂತಿ ಮಾಡಿಕೊಂಡಿರತಕ್ಕದ್ದು. ಅವರು ನನ್ನ ಹೇಳಿಕೆ ಆಧಾರದ ಮೇಲೆ ಆ ರೀತಿ ಮಾಡಿದ್ದಾರೆ ಮತ್ತು ಇದರಲ್ಲಿ ತಪ್ಪು ನನ್ನದಾಗಿದೆಯೇ ಹೊರತು ಅವರದ್ದಲ್ಲ, ಇದರಲ್ಲಿ ತಪ್ಪು ನನ್ನದಾಗಿದೆ ಮತ್ತು ಅವರ ಜವಾಬ್ದಾರಿಯನ್ನು ನಾನು ಹೊರಬೇಕಾಗಿದ್ದು ನಿಜ. ಇದರಿಂದ ಅನಗತ್ಯವಾಗಿ ಒಬ್ಬ ಅಧಿಕಾರಿಯನ್ನು ನಾನು ದೂಷಣೆ ಮಾಡುವುದಕ್ಕೆ ತಯಾರಿಲ್ಲ. ತಾವು ಇದರ ಬಗ್ಗೆ ಈಗಾಗಲೇ ವಿಚಾರಣೆ ಮಾಡಿದ್ದೀರಿ; ಆದ್ದರಿಂದ ತಾವು ತಮ್ಮ ಆಜ್ಞೆಯನ್ನು ಮರುಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಅದನ್ನು ಮರು ಪರಿಶೀಲನೆ ಮಾಡುತ್ತೇನೆ. ಈಗ ಮಾನ್ಯ ಮಂತ್ರಿಗಳು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ಒಂದು ಹೇಳಿಕೆ ಮಾಡುತ್ತಾರೆ.

ಮಂತ್ರಿಯಿಂದ ಹೇಳಿಕೆ

ವಿದ್ಯುತ್ ಸರಬರಾಜಿನ ಬಗ್ಗೆ

+ಶ್ರೀ ಎಂ. ವೀರಪ್ಪ ಮೊಯಿಲಿ (ಸಂಸದೀಯ ವ್ಯವಹಾರ ಮತ್ತು ಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ದಿನಬಳಕೆಯ ವಿದ್ಯುಚ್ಛಕ್ತಿ ಹೆಚ್ಚಾಗಿರುವುದರಿಂದ ಕ್ರಮವಾದ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಕಷ್ಟವಾಗುತ್ತದೆ. ಪ್ರತಿದಿನ 45.16 ಮಿಲಿಯನ್ ಯೂನಿಟ್‌ಗಳು ಮುಂದಿನ ಮಳೆಗಾಲದವರೆಗೆ ಲಭ್ಯವಿರುತ್ತದೆ ಹಾಗೂ ಪೀಕ್ ಲೋಡ್ 2,300 ಮೆಗಾವಾಟ್ಸ್‌ವರೆಗೂ ಸಾಧ್ಯ. ಲಭ್ಯವಿರುವ 45.16 ಮಿಲಿಯನ್ ಯೂನಿಟ್ಸ್‌ಗಿಂತ ಬೇಡಿಕೆ ಮತ್ತು ಪೀಕ್ ಲೋಡ್ 2300 ಮೆ.ವಾಟ್ಸ್‌ಗಿಂತಾ ಹೆಚ್ಚಾದರೆ ಟ್ರಾನ್ಸ್‌ಮಿಷನ್ ಲೈನ್ ಮತ್ತು ಜನರೇಟರ್‌ಗಳು ಕುಸಿದುಬೀಳುವ ಸಾಧ್ಯತೆ ಇರುತ್ತದೆ. ಡಿಸೆಂಬರ್ ತಿಂಗಳ ಕೊನೆ ದಿನಗಳಲ್ಲಿ ದಿನನಿತ್ಯದ ಬಳಕೆ 47 ಮಿ. ಯೂನಿಟ್‌ಗಿಂತಲೂ ಹೆಚ್ಚಾಗಿ ಪೀಕ್ ಲೋಡ್ 2,300 ಮೆಗವಾಟ್ಸ್‌ದಾಟಿದೆ. ಅಂತಹ ದಿನಗಳಲ್ಲಿ ಮಂಡಲಿಯ ಅನಿಯಮಿತ ಲೋಡ್ ಶೆಡ್ಡಿಂಗ್‌ನ್ನು ಸಿಸ್ಟಮ್ ಕುಸಿತವನ್ನು ತಪ್ಪಿಸಲು ಮಾಡಬೇಕಾಯಿತು. ಈ ಮೇಲಿನ ಕಾರಣದಿಂದ ಕೈಗಾರಿಗಾ ಬಳಕೆದಾರರಿಗೆ ಪ್ರತಿದಿನ ಸಾಯಂಕಾಲ 6 ರಿಂದ 9 ಗಂಟೆಯವರೆಗೆ ಸೆಕ್ಯುರಿಟಿ ಲೈಟಿಂಗ್